# 15ನೇ ಜಾಗತಿಕ ಸ್ತನ್ಯಪಾನ ಸಪ್ತಾಹ - 2006

## ಆಗಸ್ಟ್ 1 ರಿಂದ 7, 2006




ಸಿದ್ಧ ಆಹಾರ, ಮಕ್ಕಳಿಗೆ ಸುರಕ್ಷಿತವಲ್ಲ.

**ಘೋಷಣೆ : ಐ.ಎಂ.ಎಸ್. ಕಾಯ್ದೆ : ಜನತೆಗೆ ತಿಳಿಸುವುದು.**

**"ಜನತೆಯೇ ಕಂಪನಿಗಳ ವರ್ತನೆಯನ್ನು ಪರಿಶೀಲಿಸಲಿ"**

**ಬಿ.ಪಿ.ಎನ್.ಐ. ಕರ್ನಾಟಕ ರಾಜ್ಯ ಘಟಕ.**

**B.P.N.I. Karnataka State Branch.**



Continued......



# 15ನೇ ಜಾಗತಿಕ ಸ್ತನ್ಯಪಾನ ಸಪ್ತಾಹ - 2006


## ಆಗಸ್ಟ್ 1 ರಿಂದ 7, 2006

ಸ್ತನ್ಯಪಾನದ ಉತ್ತೇಜನೆ, ರಕ್ಷಣೆ, ಪೋಷಣೆಗಾಗಿ ಪ್ರತಿ ವರ್ಷವೂ ಜಾಗತಿಕ ಸ್ತನ್ಯಪಾನ ಸಪ್ತಾಹಕ್ಕೆ ಒಂದೊಂದು ವಿಶೇಷ ವಿಷಯವನ್ನು ಇಡಲಾಗುತ್ತದೆ. World Alliance for Breastfeeding Action - WABA 2006 ರ ಸಪ್ತಾಹದಲ್ಲಿ ಸ್ತನ್ಯಪಾನವನ್ನು ರಕ್ಷಿಸುವ ಸಲುವಾಗಿ ಶಿಶು ಆಹಾರ ಪದಾರ್ಥಗಳ ಜಾಹೀರಾತು ಮತ್ತು ಇತರೆ ಹಾನಿಕಾರಕ ಮಾರುಕಟ್ಟೆ ನೀತಿಗಳನ್ನು ನಿಯಂತ್ರಿಸುವುದರ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿದೆ.

ಭಾರತ ದೇಶದಲ್ಲಿ, ಬಿ.ಪಿ.ಎನ್.ಐ. ( Breastfeeding Promotion Network of India) ಇದನ್ನು "I. M. S. Act Making it Known to the People" ಎಂದರೆ - "ಐ. ಎಂ. ಎಸ್. ಕಾಯ್ದೆ ಜನತೆಗೆ ತಿಳಿಸುವುದು" ಎಂಬ ಘೋಷಣೆಯನ್ನು ಈ ವರ್ಷಕ್ಕೆ ಅಳವಡಿಸಿಕೊಂಡಿದೆ.

## ಜಾಗತಿಕ ಸ್ತನ್ಯಪಾನ ಸಪ್ತಾಹ - 2006 ರ ಉದ್ದೇಶಗಳು:

1. ಸಾರ್ವಜನಿಕರಲ್ಲಿ, ಸುದ್ದಿ ಮಾಧ್ಯಮದವರಲ್ಲಿ, ಸಂಬಂಧ ಪಟ್ಟ ಅಧಿಕಾರಿಗಳಲ್ಲಿ, ಜನ ಪ್ರತಿನಿಧಿಗಳಲ್ಲಿ ಐ.ಎಂ.ಎಸ್. ಕಾಯ್ದೆಯ ಬಗ್ಗೆ ಜಾಗೃತಿ ಮೂಡಿಸುವುದು.
2. ಐ.ಎಂ.ಎಸ್. ಕಾಯ್ದೆಯನ್ನು ಜಾರಿಗೆ ತರಲು ಮತ್ತು ಪರಿಶೀಲಿಸಲು ಸಾರ್ವಜನಿಕರನ್ನು, ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳನ್ನು ಪ್ರೇರೇಪಿಸುವುದು.
3. ಕಾಯ್ದೆಯನ್ನು ಯಶಸ್ವಿಯಾಗಿ ಜಾರಿಗೆ ತರಲು ಕಾಯ್ದೆ - ಮಸೂದೆಗಳನ್ನು ಮಾಡುವ ಅಧಿಕಾರಿಗಳ ಗಮನ ಸೆಳೆಯುವುದು.





Continued......

## 2003 ರಲ್ಲಿ ತಿದ್ದುಪಡಿಯಾದ 1992 ರ ಐ.ಎಂ.ಎಸ್. ಕಾಯ್ದೆಯ ಮುಖ್ಯಾಂಶಗಳು

1. ಶಿಶು ಮತ್ತು ಮಕ್ಕಳ ಪರ್ಯಾಯ ಆಹಾರ ಪದಾರ್ಥಗಳ ತಯಾರಕರು ಯಾವುದೇ ಜಾಹೀರಾತಿನಲ್ಲಿ ತಮ್ಮ ಪದಾರ್ಥಗಳು ತಾಯಿ ಹಾಲಿನಷ್ಟೇ ಉತ್ತಮ ಅಥವಾ ಅದಕ್ಕಿಂತ ಹೆಚ್ಚು ಎಂದು ಹೇಳುವುದನ್ನು **ನಿಷೇಧಿಸಿದೆ.**



ತಾಯಿಯ ಹಾಲೇ ಶ್ರೇಷ್ಠ

2. ಗರ್ಭಿಣಿಯರಿಗೆ, ಬಾಣಂತಿಯರಿಗೆ, ಹಾಲುಣಿಸುವ ತಾಯಂದಿರಿಗೆ ಅಥವಾ ಕುಟುಂಬ ಸದಸ್ಯರಿಗೆ ಉಚಿತವಾಗಿ ತಾವು ತಯಾರಿಸಿದ ವಸ್ತುಗಳನ್ನು ಕೊಡುವುದನ್ನು **ನಿಷೇಧಿಸಿದೆ.**




3. ಬೇರೆ ಯಾವುದೇ ವ್ಯಕ್ತಿಗೆ ದೇಣಿಗೆ ನೀಡುವುದು ಅಥವಾ ಉಚಿತ / ಕಡಿಮೆ ಬೆಲೆಯಲ್ಲಿ ತಮ್ಮ ಕಂಪನಿಯ ಶಿಶು ಮತ್ತು ಮಕ್ಕಳ ಆಹಾರ ಪದಾರ್ಥಗಳು, ಹಾಲುಣಿಸುವ ಬಾಟಲಿಗಳು ಅಥವಾ ತಮ್ಮ ವಸ್ತುಗಳ ಬಗೆಗಿನ ಚಿತ್ರಪತ್ರಗಳನ್ನು ವಿತರಿಸುವುದನ್ನು **ನಿಷೇಧಿಸಲಾಗಿದೆ.**




4. ಶಿಶು ಮತ್ತು ಮಕ್ಕಳ ಪರ್ಯಾಯ ಆಹಾರ ಪದಾರ್ಥಗಳ ತಯಾರಕರು ತಮ್ಮ ವಸ್ತುಗಳ ಲೇಬಲ್ ಮೇಲೆ ತಾಯಿಯ ಹಾಲು ಅತ್ಯುತ್ತಮ ಎಂದು ಕಡ್ಡಾಯವಾಗಿ ಹಾಕಿರಬೇಕು. ಮತ್ತು ಹೆಚ್ಚಿನ ಮಾರಾಟದ ಉದ್ದೇಶದಿಂದ ಲೇಬಲ್ ಮೇಲೆ ತಾಯಿ ಅಥವಾ ಮಗುವಿನ ಚಿತ್ರಗಳನ್ನು ಹಾಕುವುದನ್ನು **ನಿಷೇಧಿಸಿದೆ.**






Continued......

## 2003 ರಲ್ಲಿ ತಿದ್ದುಪಡಿಯಾದ 1992 ರ ಐ.ಎಂ.ಎಸ್. ಕಾಯ್ದೆಯ ಮುಖ್ಯಾಂಶಗಳು




5. ಶಿಶು ಮತ್ತು ಮಕ್ಕಳ ಆಹಾರಕ್ಕೆ ಸಂಬಂಧಿಸಿದ ಬಿತ್ತಿಪತ್ರಗಳಲ್ಲಿ ಕಡ್ಡಾಯವಾಗಿ ಐ.ಎಂ.ಎಸ್. ಕಾಯ್ದೆಯ ನಿಯಮಗಳನ್ನು ಅಳವಡಿಸಿ ಕೊಂಡಿರಬೇಕು.




6. ಯಾವುದೇ ಆಸ್ಪತ್ರೆ, ಕ್ಲಿನಿಕ್ ಅಥವಾ ಔಷಧಿ ಅಂಗಡಿಗಳಲ್ಲಿ ಯಾವುದೇ ಕಂಪನಿಯು ತಮ್ಮ ವಸ್ತುಗಳ ಬಗೆಗಿನ ಫೋಸ್ಟರ್‌ಗಳನ್ನು ಹಾಕುವುದನ್ನು **ನಿಷೇಧಿಸಿದೆ.**




7. ಯಾವುದೇ ಕಂಪನಿಯು ತಮ್ಮಲ್ಲಿ ತಯಾರಿಸಿದ ಶಿಶು ಮತ್ತು ಮಕ್ಕಳ ಆಹಾರ ಪದಾರ್ಥಗಳು, ಹಾಲುಣಿಸುವ ಬಾಟಲಿಗಳ ಮಾರಾಟಾಭಿವೃದ್ಧಿಗಾಗಿ ಆರೋಗ್ಯ ಕಾರ್ಯಕರ್ತರಿಗೆ ಇಲ್ಲವೆ, ಯಾವುದಾದರೂ ಆರೋಗ್ಯ ಸಭೆ / ಆರೋಗ್ಯ ಶಿಕ್ಷಣ ಕೋರ್ಸ್ / ಕಾನ್ಫರೆನ್ಸ್ / ಸ್ಪರ್ಧೆಗಳಿಗೆ ಹಣ / ದೇಣಿಗೆ ಕೊಡುವುದನ್ನು **ನಿಷೇಧಿಸಿದೆ.**




8. ಐ.ಎಂ.ಎಸ್. ಕಾಯ್ದೆಯು, ಯಾವುದೇ ಕಂಪನಿ ತನ್ನಲ್ಲಿ ತಯಾರಾದ ಶಿಶು ಮತ್ತು ಮಕ್ಕಳ ಪರ್ಯಾಯ ಆಹಾರ ಪದಾರ್ಥಗಳ, ಹಾಲುಣಿಸುವ ಬಾಟಲಿಗಳನ್ನು ಮಾರಾಟ ಮಾಡುವ ವ್ಯಕ್ತಿಗೆ ಕಮೀಷನ್ ಕೊಡುವುದನ್ನು **ನಿಷೇಧಿಸಿದೆ.**



Continued......



## ಐ.ಎಂ.ಎಸ್. ಕಾಯ್ದೆಯ ಮುಖ್ಯ ಉದ್ದೇಶಗಳು :

ಶಿಶು ಮತ್ತು ಮಕ್ಕಳಿಗೆ ಸುರಕ್ಷಿತವಾದ ಮತ್ತು ಹೆಚ್ಚಿನ ಪೋಷಕಾಂಶಗಳನ್ನು ಒದಗಿಸುವುದಾಗಿದೆ.

ಅದು ಹೇಗೆಂದರೆ :

- ಸ್ತನ್ಯಪಾನಕ್ಕೆ ಉತ್ತೇಜನ, ರಕ್ಷಣೆ ಮತ್ತು ಪ್ರೋತ್ಸಾಹ ನೀಡುವುದರ ಮೂಲಕ
- ಶಿಶು ಮತ್ತು ಮಕ್ಕಳ ಪರ್ಯಾಯ ಆಹಾರ ಪದಾರ್ಥಗಳ ಮಾರಾಟ ಮತ್ತು ವಿತರಣಾ ವಿಧಾನ ಬಗ್ಗೆ ತಿಳಿದುಕೊಳ್ಳುವುದು.



6 ತಿಂಗಳವರೆಗೆ ಕೇವಲ ತಾಯಿಯ ಹಾಲು
ನಂತರ ತಾಯಿಯ ಹಾಲಿನ ಜೊತೆಗೆ ಮನೆಯಲ್ಲೇ
ತಯಾರಿಸಿದ ಪೂರಕ ಆಹಾರ ಪಡೆದ
ಒಂಬತ್ತು ತಿಂಗಳ ಆರೋಗ್ಯವಂತ ಮಗು



Continued......

# ಸಾರ್ವಜನಿಕರು ಕಂಪನಿಗಳ ವಿರುದ್ಧ ಯಾವ ರೀತಿ ಕ್ರಮ ಕೈಗೊಳ್ಳಬಹುದು ?

1. ಕಂಪನಿಗಳ ವರ್ತನೆಯನ್ನು ಸೂಕ್ಷ್ಮವಾಗಿ ಗಮನಿಸಿ ಅವರ ಸ್ಥಳೀಯ ಎಂ.ಎಲ್.ಎ., ಎಂ.ಪಿ., ರಾಜ್ಯ/ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ವರದಿ ಸಲ್ಲಿಸಬಹುದು.

2. ಟಿ.ವಿ., ಕೇಬಲ್ ನೆಟ್ ವರ್ಕ್, ವೃತ್ತ ಪತ್ರಿಕೆ, ದಿನಪತ್ರಿಕೆ ಅಥವಾ ಇನ್ನಾವುದೇ ಮಾಧ್ಯಮಗಳಲ್ಲಿ ಯಾವುದೇ ಕಂಪನಿಯು ಶಿಶು ಮತ್ತು ಮಕ್ಕಳ ಸಿದ್ಧ ಆಹಾರವಸ್ತುಗಳ ಬಗ್ಗೆ ಜಾಹಿರಾತು ನೀಡಿದರೆ ಅಂತಹ ಮಾಧ್ಯಮಗಳಿಗೆ ಕೂಡಲೇ ಆ ಕಂಪನಿಯ ಜಾಹಿರಾತು ಪ್ರಸಾರವನ್ನು ನಿಲ್ಲಿಸಲು ಕೇಳಿಕೊಳ್ಳಬೇಕು. ಕೇಳದಿದ್ದಲ್ಲಿ, ಸ್ಥಳೀಯ ಶಾಸಕರು ಅಥವಾ ಪೋಲೀಸ್ ಕಮೀಷನರ್‌ಗೆ ದೂರು ಸಲ್ಲಿಸಬಹುದು.

3. ಯಾವುದಾದರೂ ಶಿಶು ಮತ್ತು ಮಕ್ಕಳ ಸಿದ್ಧ ಆಹಾರ ವಸ್ತು ತಯಾರಿಕಾ ಕಂಪನಿಯು ಐ.ಎಂ.ಎಸ್. ಕಾಯ್ದೆಯನ್ನು ಉಲ್ಲಂಘಿಸಿರುವುದು ತಮ್ಮ ಗಮನಕ್ಕೆ ಬಂದರೆ, ಅಂತಹ ಕಂಪನಿಗಳಿಗೆ ನೇರವಾಗಿ ಅದರ ತಪ್ಪುಗಳನ್ನು ಪತ್ರದ ಮೂಲಕ ಬರೆದು ತಿಳಿಸಬಹುದು.

## ದೂರು ಸಲ್ಲಿಸುವ ವಿಳಾಸಗಳು :

1. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
   ಬಹುಮಹಡಿ ಕಟ್ಟಡ, ಅಂಬೇಡ್ಕರ್ ಬೀದಿ, ಬೆಂಗಳೂರು - 560 001.
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ 'ಎ' ವಿಭಾಗ,
   ಶಾಸ್ತ್ರಿ ಭವನ, ಹೊಸ ದೆಹಲಿ - 110 001.
3. ನಿರ್ದೇಶಕರು, ಆರೋಗ್ಯ ಸೇವಾ ಕಛೇರಿ,
   ಆರೋಗ್ಯ ಇಲಾಖೆ ನಿರ್ಮಾಣ ಭವನ, ಹೊಸ ದೆಹಲಿ - 110 001.



Continued......

## ಎದೆ ಹಾಲಿನ ಪ್ರಯೋಜನಗಳು



### ಎದೆಯ ಹಾಲಿನಿಂದ

- ಸಂಪೂರ್ಣ ಪೌಷ್ಠಿಕಾಂಶ
- ಸುಲಭ ಜೀರ್ಣ ಹಾಗೂ ಪರಿಣಾಮಕಾರಿ ಉಪಯೋಗ
- ಸೋಂಕನ್ನು ತಡೆಗಟ್ಟಿ ಕಾಪಾಡುತ್ತದೆ
- ಮಗುವಿನ ಮೆದುಳಿನ ಬೆಳವಣಿಗೆಯನ್ನು ವೃದ್ಧಿಸುತ್ತದೆ.



### ಎದೆ ಹಾಲುಣಿಸುವಿಕೆಯಿಂದ

- ಬೆಳವಣಿಗೆಗೆ ಸಹಾಯಕಾರಿ
- ತಾಯಿ-ಮಗು ಬಾಂಧವ್ಯ ವೃದ್ಧಿಸುತ್ತದೆ.
- ಹೊಸಗರ್ಭ ತಡೆಗಟ್ಟಲು ಸಹಾಯ ಮಾಡುತ್ತದೆ.
- ತಾಯಿಯ ಆರೋಗ್ಯ ರಕ್ಷಿಸುತ್ತದೆ.

## ಇತರೆ ಹಾಲಿನ ಅಪತ್ತುಗಳು ಹಾಗೂ ಮಗುವಿಗೆ ಬರುವ ತೊಂದರೆಗಳು



- ಅತಿ ಬೇದಿ ಮತ್ತು ಉಸಿರಾಟದ ತೊಂದರೆಗಳು
- ತಡೆಯಿಲ್ಲದ ಅತಿ ಬೇದಿ
- ವಿಟಮಿನ್ 'ಎ' ಅನ್ನಾಂಗದ ಕೊರತೆ
- ಹೆಚ್ಚು ಅಕಾಲಿಕ ಮರಣಗಳು



- ಹೆಚ್ಚು ಸೋಂಕು ಮತ್ತು ಸಹಿಸಲಾಗದ ಹಾಲಿನ (ಅಲರ್ಜಿ) ತೊಂದರೆ
- ದೀರ್ಘಕಾಲದ ಕಾಯಿಲೆ ಬರುವ ಸಾಧ್ಯತೆ ಹೆಚ್ಚು
- ಅತಿ ಹೆಚ್ಚು ತೂಕ
- ಪರೀಕ್ಷೆಗಳಲ್ಲಿ ಕಡಿಮೆ ಅಂಕ ಗಳಿಸುವಿಕೆ

**ತಾಯಿಗೆ** ಗರ್ಭಧಾರಣೆ ಬೇಗ ಆಗಬಹುದು. ರಕ್ತಹೀನತೆಯ ತೊಂದರೆ. ಅಂಡಾಶಯ ಮತ್ತು ಮೊಲೆಯ ಕ್ಯಾನ್ಸರ್ ರೋಗದ ತೊಂದರೆಗಳು.



Continued......

# ಬಿ.ಪಿ.ಎನ್.ಐ. ಕರ್ನಾಟಕ ರಾಜ್ಯ ಘಟಕ.

**ಡಾ|| ನಿರ್ಮಲಾ ಕೇಸರೀ**
ಅಧ್ಯಕ್ಷರು, ಬಿ.ಪಿ.ಎನ್.ಐ.
ಕರ್ನಾಟಕ ರಾಜ್ಯ ಘಟಕ.

**ಡಾ|| ಸಿ. ಆರ್. ಬಾಣಾಪುರಮಠ್**
ರಾಜ್ಯ ಸಂಚಾಲಕರು, ಬಿ.ಪಿ.ಎನ್.ಐ.,
ಕರ್ನಾಟಕ ರಾಜ್ಯ ಘಟಕ.

**ಡಾ|| ಶೋಭಾ ಬಾಣಾಪುರಮಠ್**
ಕಾರ್ಯದರ್ಶಿಗಳು, ಬಿ.ಪಿ.ಎನ್.ಐ.
ಕರ್ನಾಟಕ ರಾಜ್ಯ ಘಟಕ.

**ಡಾ|| ಎಂ. ಬಿ. ಕೌಜಲಗಿ**
ಖಜಾಂಚಿ, ಬಿ.ಪಿ.ಎನ್.ಐ.,
ಕರ್ನಾಟಕ ರಾಜ್ಯ ಘಟಕ.

---

**ಕಛೇರಿ : ಬಾಪೂಜಿ ಮಕ್ಕಳ ಆರೋಗ್ಯ ಸಂಸ್ಥೆ ಮತ್ತು ಸಂಶೋಧನಾ ಕೇಂದ್ರ,**
ದಾವಣಗೆರೆ- 577 004, ಕರ್ನಾಟಕ ರಾಜ್ಯ. ಫೋ. : 08192-250350,
ಫ್ಯಾಕ್ಸ್ : 08192-257132 ಈ ಮೇಲ್ - beabchi@hotmail.com

| ಬಿ.ಪಿ.ಎನ್.ಐ. ಜಿಲ್ಲಾ ಘಟಕ | ಅಧ್ಯಕ್ಷರು | ಕಾರ್ಯದರ್ಶಿಗಳು |
|---|---|---|
| ಚಿತ್ರದುರ್ಗ | ಡಾ|| ಕೋಮಲಾ ವಿ. ಮರೆಗುದ್ದಿ | ಡಾ|| ಎಂ. ರವಿ |
| ಶಿವಮೊಗ್ಗ | ಡಾ|| ಸುಬ್ರಹ್ಮಣ್ಯ ಉಡುಪ | ಡಾ|| ಎಚ್. ವಿ. ಕೊಟ್ಟುರೇಶ |
| ದಾವಣಗೆರೆ | ಡಾ|| ಆರ್. ಜಿ. ಗೀತಾಲಕ್ಷ್ಮಿ | ಡಾ|| ಎನ್. ಕೆ. ಕಾಳಪ್ಪನವರ್ |
| ಬಾಗಲಕೋಟೆ | ಡಾ|| ಸುರೇಶ ಕೆ. ಕಾಖಂಡಕಿ | ಡಾ|| ಭುವನೇಶ್ವರಿ ಸಿ. ಯಳಮಲಿ |
| ಮೈಸೂರು | ಡಾ|| ಎನ್. ನಾರಾಯಣಪ್ಪ | ಡಾ|| ಪ್ರಶಾಂತ ಎಸ್. ಎನ್. |
| ಬೆಂಗಳೂರು | ಡಾ|| ಲೀಲಾ ಭಗವಾನ | ಡಾ|| ಚಿತ್ರಾ ನರಸಿಂಹನ್ |
| ಗುಲ್ಬರ್ಗ | ಡಾ|| ಎಚ್. ವೀರಭದ್ರಪ್ಪ | ಡಾ|| ದಿನಕರ ಮೋರೆ |
| ಬೆಳಗಾಂ | ಡಾ|| ಮಹಾಂತಶೆಟ್ಟಿ ಎನ್. ಎಸ್. | ಡಾ|| ರೂಪಾ ಎಂ. ಬೆಲ್ಲದ |
| ಕೊಪ್ಪಳ | ಡಾ|| ಅನಂತರಾಜ ಎನ್. ಗೋಗಿ | ಡಾ|| ಸಿ. ಶರಣಪ್ಪ |
| ಬಳ್ಳಾರಿ | ಡಾ|| ಶ್ರೀನಿವಾಸಲು | ಡಾ|| ಜೆ. ಶಂಕರ |

ಗ್ಯಾಲಕ್ಸಿ ಗ್ರಾಫಿಕ್ಸ್, ದಾವಣಗೆರೆ. 9343550023